ಕೌಂಟರಿಗೆ ಹೋಗಿ, ನನ್ನ ಜೇಬಿನಿಂದ ಹಣವನ್ನು ತೆಗೆದು "ತಗೊಳ್ಳಿ" ಎಂದು ಅವನ ಮುಂದೆ ಹಿಡಿದೆ. ನಾನು ಅತ್ಯಂತ ಸಹಜವಾಗಿ ಇರಲು ಯತ್ನಿಸುತ್ತಿದ್ದರೂ ಸಹ ಅದು ಹೇಗೊ ನಾನು ಹಣವನ್ನು ಇದ್ದಕ್ಕಿದ್ದಂತೆ ಮುಂದೆ ಹಿಡಿದ ರೀತಿ ಅಕೌಂಟಂಟ್‌ನ ಬೆಚ್ಚಿ ಬೀಳಿಸಿದಂತೆ ಇತ್ತು.

"ತಗೊಳ್ಳಿ, ಜಮಾ ಮಾಡಿ," ನಾನು ಎಷ್ಟೇ ಪ್ರಯತ್ನ ಪಟ್ಟರೂ ನನ್ನ ಧ್ವನಿ ಮತ್ತು ನನ್ನ ಬಿಳುಚಿದ ಮುಖ ಒಂದಕ್ಕೊಂದು ಹೊಂದಿಕೊಂಡಂತೆ ಇರಲಿಲ್ಲ. "ಆದಷ್ಟು ಬೇಗ ಈ ಹಣ ಜಮಾ ಮಾಡುವ ತ್ರಾಸದಾಯಕ ಕೆಲಸವನ್ನ ಮುಗಿಸಿಬಿಡೋಣ" ಅವನಿಗೆಂದೆ.

ಅಕೌಂಟಂಟ್ ಇವಕ್ಕೆಲ್ಲ ಯಾವುದೇ ಪ್ರತಿಕ್ರಿಯೆ ತೋರಲಿಲ್ಲ. ನನ್ನ ಬಳಿ ಹಣ ತೆಗೆದು ಕೊಂಡವನೆ ಅದನ್ನು ಇನ್ನೊಬ್ಬ ಕ್ಲರ್ಕ್‌ಗೆ ದಾಟಿಸಿದ.

ಇನ್ನೊಬ್ಬ ಕ್ಲರ್ಕ್ ಹಣ ತೆಗೆದುಕೊಂಡು, ನನ್ನ ಬಳಿ ಹಲವಾರು ಫಾರ್ಮ್‌ಗಳನ್ನ ತುಂಬಿ, ಅಲ್ಲಿ ನಾನು ಕೊಟ್ಟ ಹಣದ ಮೊತ್ತವನ್ನು ನಮೂದಿಸಿ, ನನ್ನಿಂದ ಹಲವೆಡೆ ಸಹಿ ಮಾಡಿಸಿಕೊಂಡ. ನಿಜ ಹೇಳಬೇಕೆಂದರೆ, ಈಗ ನಾನು ಏನು ಮಾಡುತ್ತಿದ್ದೇನೆ ಎನ್ನುವುದು ನನಗೆ ತಿಳಿಯುತ್ತಿರಲಿಲ್ಲ.

"ಜಮಾ ಆಯಿತೇ ?'' ನಾನು ಖಾಲಿಯಾಗಿ ನಡುಗುವ ಧ್ವನಿಯಲ್ಲಿ ಕೇಳಿದೆ.

"ಆಗಿದೆ" ಕ್ಲರ್ಕ್ ಉತ್ತರಿಸಿದ.

"ಹಾಗಾದರೆ ನಾನು ಒಂದಷ್ಟು ಹಣವನ್ನು ತೆಗೆಯಲು ಬಯಸುತ್ತೇನೆ."

ನಾನು ಯೋಚಿಸುತ್ತಿದ್ದುದು ಐವತ್ತು ರೂಪಾಯಿಗಳನ್ನು ಅಕೌಂಟ್‌ನಿಂದ ತೆಗೆಯುವುದು ಎಂದು. ಯಾರೋ ನನಗೆ ಹಣವನ್ನು ತೆಗೆಯಲು ತುಂಬಬೇಕಾದ ಫಾರ್ಮ್ ಕೊಟ್ಟರು. ಇನ್ಯಾರೋ ಬಂದು ಅದನ್ನು ತುಂಬುವುದು ಹೇಗೆ ಎನ್ನುವದನ್ನು ವಿವರಿಸಿದರು.
ಬ್ಯಾಂಕಿನಲ್ಲಿದ್ದವರಿಗೆ ನಾನೊಬ್ಬ ದಾರಿ ತಪ್ಪಿ ಇಲ್ಲಿಗೆ ಬಂದ ಲಕ್ಷಾಧೀಶ ಅನ್ನಿಸಿರಬೇಕು. ನಾನು ಫಾರ್ಮಿನ ಮೇಲೆ ಯಾವುದೋ ಒಂದು ಮೊತ್ತವನ್ನು ನಮೂದಿಸಿ, ಕ್ಲರ್ಕ್‌ಗೆ ನೀಡಿದೆ. ನೀಡಿದೆ ಅನ್ನುವುದಕ್ಕಿಂತ ಅವನ ಕೌಂಟರಿನಲ್ಲಿ ಕುಕ್ಕಿದೆ ಎನ್ನುವುದೇ ಸರಿ. ನಾನು ಹೀಗೆ ಮಾಡಬೇಕು ಅನ್ನುವ ಯಾವುದೇ ಪೂರ್ವ ವಿಚಾರವನ್ನು ಮಾಡಿಲ್ಲವಾಗಿದ್ದರೂ, ಇವೆಲ್ಲ ನನ್ನ ಹಿಡಿತ ಮೀರಿ ಆಗುತ್ತಿತ್ತು.

"ಏನು ? ನೀವು ಅಕೌಂಟ್‌ನಲ್ಲಿ ಇರೋದನ್ನೆಲ್ಲ ತೆಗೆಯುತ್ತೀರಾ? ಈಗ ತಾನೆ ಜಮಾ ಮಾಡಿದ್ದಿರಲ್ಲ'' ಕ್ಲರ್ಕ್ ಆಶ್ಚರ್ಯದಿಂದ ಫಾರ್ಮ್ ನೋಡುತ್ತ ಕೇಳಿದ.

ನನಗೆ ಆಗಲೆ ಗೊತ್ತಾಗಿದ್ದು. ಐವತ್ತು ಎಂದು ಬರೆಯುವ ಬದಲು ನಾನು ಎಂಟು ನೂರಾ ಐವತ್ತು ಎಂದು ಬರೆದಿದ್ದೆ. ಆದರೆ ಆ ಕ್ಷಣದಲ್ಲಿ ನಾನು ಅದೆಷ್ಟು ಗೊಂದಲದಲ್ಲಿ ಇದ್ದೆ ಎಂದರೆ ನಾನು ಹಾಗೆ ಮಾಡಿದ್ದು ಯಾಕೆ ಎನ್ನುವುದನ್ನು ವಿವೇಚಿಸಲೇ ಹೋಗಲಿಲ್ಲ ಅಥವಾ ನನಗೆ ಯಾಕೆ ಹೀಗೆಲ್ಲ ಆಗುತ್ತಿದೆ ಎನ್ನುವುದನ್ನು ಈ ಕ್ಲರ್ಕ್‌ಗೆ ವಿವರಿಸುವುದೂ ಸಹ ಅಸಾಧ್ಯವಾಗಿ ತೋರಿತು. ಬ್ಯಾಂಕಿನಲ್ಲಿದ್ದ ಎಲ್ಲ ಕ್ಲರ್ಕ್‌ಗಳು ಕೌಂಟರಿನಿಂದ ತಲೆಯೆತ್ತಿ ನನ್ನ ಕಡೆಯೇ ನೋಡುತ್ತಿರುವಂತೆ ಭಾಸವಾಯಿತು. ಈ ಕಠೋರವಾದ ಕ್ಷಣಗಳು ಕಳೆದರೆ ಸಾಕೆಂದು ನಾನು ಪ್ರಾರ್ಥಿಸತೊಡಗಿದೆ.

"ಹೌದು, ಅಷ್ಟೂ ಹಣವನ್ನು ತೆಗೆಯುತ್ತೇನೆ."

"ಅಲ್ಲ ಸ್ವಾಮೀ, ಈಗ ತಾನೆ ಜಮಾ ಮಾಡಿದ ಹಣವನ್ನು ಪೂರ್ತಿಯಾಗಿ ತೆಗೆಯುತ್ತೀರ?"

"ಹೌದು, ನನ್ನ ಒಂದೊಂದು ಪೈಸೆ ಸಹ.'' ನನ್ನ ಧ್ವನಿಯಲ್ಲಿ ಸಣ್ಣಗೆ ಕ್ರಾಂತಿಯ ಕಿಡಿ ಇದೆ ಇರುವಂತೆ ಅನ್ನಿಸಿತು.